# B.A IIIrd Semester

## DEPT OF SOCIOLOGY

## DSC 1 C: SOCIAL RESEARCH METHODS

## Unit –IV: Types of Research
## **ಸಂಶೋಧನಾ ಪ್ರಕಾರಗಳು**

- Basic and Applied Research
- Historical and Empirical Research
- Descriptive, Exploratory, Explanatory & Experimental

## Types of Research **ಸಂಶೋಧನಾ ಪ್ರಕಾರಗಳು**

ಸಂಶೋಧನಾ ವಿಧಾನಗಳಿಗೆ ಸಂಬಂಧಿಸಿದಂತೆ ಸರ್ವಸಮ್ಮತವಾದ ವರ್ಗೀಕರಣವೆನ್ನುವುದು ಕಂಡು ಬರುವುದಿಲ್ಲ. ಹಲವು ಸಂಶೋಧಕರು ತಮ್ಮ ಸಂಶೋಧನೆಗೆ ಅಳವಡಿಸಿಕೊಂಡ ವಿಧಾನಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಲಾಗಿದೆ.

| | |
|---|---|
| 1. ಶುದ್ಧ ಅಥವಾ ಅನ್ವಯಿಕ ಸಂಶೋಧನೆ | Pure and Applied Research |
| 2. ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕ ಸಂಶೋಧನೆ | Descriptive and analytical Research |
| 3. ಪರಿಮಾಣಾತ್ಮಕ ಮತ್ತು ಗುಣಾತ್ಮಕ ಸಂಶೋಧನೆ | Quantitative and qualitative Research |
| 4. ಪ್ರಾಕೃತಿಕ ಮತ್ತು ಸಾಮಾಜಿಕ ಸಂಶೊಧನೆ | Natural and Social Research |
| 5. ಕ್ರೀಯಾತ್ಮಕ ಮತ್ತು ಲಕ್ಷಣ ನಿರ್ಣಯಕ ಸಂಶೋಧನೆ | Action and Diagnostice Research |
| 6. ಐತಿಹಾಸಿಕ ಮತ್ತು ತುಲನಾತ್ಮಕ ಸಂಶೋಧನೆ | Historical and Comparative Research |
| 7. ಅನುಭವೈಕ ಸಂಶೋಧನೆ | Conceptual and empirical Research |
| 8. ಪರಿಶೋಧನಾತ್ಮಕ ಸಂಶೋಧನೆ | Exploratory Research |
| 9. ಮಾದರಿ ರೂಪಿಕರಣ ಸಂಶೋಧನೆ | Model building Research |
| 10. ಗ್ರಂಥಾಲಯ ಸಂಶೋಧನೆ | Library Research |

**ಸಂಶೋಧನಾ ವಿಧಾನಗಳು ಸಂಶೋಧನಾ ಸ್ವರೂಪ ಮತ್ತು ಲಕ್ಷಣಗಳ ಆಧಾರದ ಮೇಲೆ 8 ಪ್ರಕಾರವಾಗಿ ವರ್ಗೀಕರಿಸಲಾಗಿದೆ. ಅವುಗಳು ಈ ಕೆಳಗಿನಂತಿವೆ.**

ಸಂಶೋಧನೆಯು ಹಲವು ದೃಷ್ಟಕೋನದಿಂದ ನೋಡುವ ಸಾಧ್ಯತೆಯಿರುವುದರಿಂದ, ವ್ಯಾಪ್ತಿಯನ್ನು ಗಮನದಲ್ಲಿಟ್ಟುಕ್ಕೊಂಡು 2 ರೀತಿಯಲ್ಲಿ ವರ್ಗೀಕರಿಸಬಹುದು.

1. ವಿಷಯ ಅವಲಂಬಿತ ವರ್ಗೀಕರಣ
2. ವ್ಯಾಪ್ತಿ ಅವಲಂಬಿತ ವರ್ಗೀಕರಣ

ವಿಷಯ ಅವಲಂಬಿತ ವರ್ಗೀಕರಣ: ವಸ್ತುವನ್ನು ಗಮನದಲ್ಲಿಟ್ಟುಕೊಂಡು ವರ್ಗೀಕರಣ ಮಾಡುವನ್ನು ವಿಷಯ ಅವಲಂಬಿತವೆನಿಸುತ್ತವೆ ಅವುಗಳು ಈ ಕೆಳಗಿನಂತಿವೆ.

| | |
|---|---|
| 1. ಮೂಲಭೂತ ಸಂಶೋಧನೆ | Basic Research |
| 2. ಅನ್ವಯಿಕ ಸಂಶೋಧನೆ | Applied Research |
| 3. ಕ್ರಿಯಾ ಸಂಶೋಧನೆ | Action Research |

ವ್ಯಾಪ್ತಿ ಅವಲಂಬಿತ ವರ್ಗೀಕರಣ:ಸಂಶೋಧನಾ ವಿಷಯವನ್ನು ಗಮನದಲ್ಲಿಟ್ಟುಕೊಂಡು ಈ ಕೆಳಗಿನಂತೆ ವಿಂಗಡಿಸಬಹುದು

1. ಐತಿಹಾಸಿಕ ಸಂಶೋಧನೆ — Historical Research
2. ಪ್ರಾಯೋಗಿಕ ಸಂಶೊಧನೆ — Empirical Research
3. ವಿವರಣಾತ್ಮಕ ಸಂಶೋಧನೆ — Descriptive Research
4. ಪರಿಶೋಧಾತ್ಮಕ ಸಂಶೋಧನೆ — Exploratory Research
5. ವಿಶ್ಲೇಷಣಾತ್ಮಕ ಸಂಶೋಧನೆ — Explanatory Research
6. ಪ್ರಯೋಗಾತ್ಮಕ ಸಂಶೋಧನೆ — Experimental Research

## ಮೂಲಭೂತ ಸಂಶೋಧನೆ: Basic Research

ಜ್ಞಾನ ಸಂಪಾದನೆಗಾಗಿ ಕೈಕೊಂಡ ಸಂಶೋಧನೆಯನ್ನು ಮೂಲಭೂತ ಅಥವಾ ಶುದ್ದ ಸಂಶೋಧನೆ ಎಂದು ಕರೆಯಲಾಗುತ್ತದೆ. ಉದಾಹರಣೆ ನ್ಯೂಟನನ ಗುರುತ್ವಾಕರ್ಷಣೆ, ಐನಸ್ಟೈನ್‌ರ ಸಾಪೇಕ್ಷ ಸಿದ್ಧಾಂತ, ಮಾಲ್ಥಸರ ಜನಸಂಖ್ಯಾ ಸಿದ್ದಾಂತ, ಗೆಲಿಲಿಯೋರವರ ದೂರದರ್ಶಕ ಇತ್ಯಾದಿ ಸಂಶೋಧನೆಗಳು ಶುದ್ಧ ಸಂಶೋಧನೆಗಳಾಗಿವೆ. ಶುದ್ಧ ಸಂಶೋಧನೆಯನ್ನು ಮೂಲಭೂತ ಸಂಶೋಧನೆಯೆಂದು ಕರೆಯುತ್ತಾರೆ. ಜ್ಞಾನವನ್ನು ಹೆಚ್ಚಿಸಕೊಳ್ಳುವ ಅಥವಾ ಜ್ಞಾನವನ್ನು ವಿಕಸಿಸುವ ದೃಷ್ಟಿಯಿಂದ ನಿರ್ದಿಷ್ಟವಾದ ಕ್ಷೇತ್ರವನ್ನು ಆಯ್ಕೆಮಾಡಿಕೊಂಡು ಸಂಶೊಧನೆ ಕೈಗೊಂಡಿರುವುದನ್ನು ಪ್ರಾಥಮಿಕ ಸ್ವರೂಪದ ಸಂಶೋಧನೆಯನ್ನು ಮೂಲಭೂತ ಸಂಶೋಧನೆ ಎಂದು ಕರೆಯಲಾಗುತ್ತದೆ. ಅಂದರೆ ಇಲ್ಲಿ ಸ್ಥಾಪಿತವಾದ ಸಿದ್ಧಾಂತಗಳನ್ನು ದೃಢಿಕರಿಸುವುದು ಮತ್ತು ಅಧ್ಯಯನದ ಫಲಿತಾಂಶಗಳ ಆಧಾರದ ಮೇಲೆ ಹೊಸ ಸಿದ್ಧಾಂತಗಳನ್ನು ಸ್ಥಾಪಿಸುವ, ಸಾರ್ವತ್ರಿವೆನಿಸುವ ಸಾಮಾನ್ಯೀಕರಣಗಳನ್ನು ಮಾಡುವ ಉದ್ದೇಶಗಳನ್ನು ಒಳಗೊಂಡಿದೆ.

ಮೂಲಭೂತ ಪ್ರಾಥಮಿಕ ಸಂಶೋಧನೆಯ ಉದ್ದೇಶ ಜ್ಞಾನವನ್ನು ಸಂಪಾದನೆ ಮಾಡುವುದು ಅಧ್ಯಯನದ ಫಲಿತಾಂಶಗಳ ಆಧಾರದ ಮೇಲೆ ಸ್ಥಾಪಿತವಾದ ಸಿದ್ದಾಂತವನ್ನು ದೃಢೀಕರಿಸಲು ಹೊಸ ಸಿದ್ದಾಂತವನ್ನು ಸ್ಥಾಪಿಸುವ ಸಾರ್ವತ್ರಿಕವೆನಿಸುವ & ಸಾಮಾನ್ಯೀಕರಣ ಮಾಡುವ ಉದ್ದೇಶ ಒಳಗೊಂಡಿದೆ.

## ಮೂಲಭೂತ ಸಂಶೋಧನೆ ಉಪಯೋಗ Uses of Basic Research

ಮೂಲಭೂತ ಸಂಶೋಧನೆಯು ಸಿದ್ಧಾಂತಗಳನ್ನು ರಚಿಸಿ,ಜ್ಞಾನಕ್ಕೆ ಕೊಡುಗೆಯನ್ನು ನೀಡುವ ಎಲ್ಲೆಡೆಯು ಅನ್ವಯವಾಗುವಂತಹ ಮೂಲಭೂತ ಸತ್ಯಗಳನ್ನು ಶೋಧಿಸುವ ಗುರಿಯನ್ನು ಹೊಂದಿರುವ ಮತ್ತು ದೂರದೃಷ್ಟಿಯುಳ್ಳ ವಿಶಾಲವಾದ ವಿಷಯಗಳಿಗೆ ಸಂಬಂಧಿಸಿದ ಸಂಗತಿಗಳನ್ನು ಸಂಶೋಧಿಸಿ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸುವುದು ಪ್ರಯೋಗಿಕ ಸಮಸ್ಯೆಗಳಿಗೆ ಕಂಡುಹಿಡಿಯುವಲ್ಲಿ ಉಪಯೋಗವಾಗುತ್ತದೆ.

-  ಸಮಸ್ಯೆಗಳಿಗೆ ಪರಿಹಾರ ಸೂಚಿಸುವುದು: ಮೂಲಭೂತ ಅಥವಾ ಶುದ್ಧ ಸಂಶೋಧನೆಯು ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸುತ್ತದೆ. ಉದಾ: ದಿಕ್ಸೂಚಿ ಯಂತ್ರದ ಶೋಧನೆಯಿಂದ ಹಾದಿಯನ್ನು ತಪ್ಪುವ ಸಮಸ್ಯೆಗೆ ಪರಿಹಾರ ದೊರಕ್ಕಿದ್ದು.
-  ಸಂಕೀರ್ಣತೆಗೆ ಸಮಾಧಾನಕರ ಉತ್ತರ ನೀಡುವುದು: ಸಮಾಜದಲ್ಲಿರುವ ಸಂಕೀರ್ಣ ಸಮಸ್ಯೆಗಳಾದ ಜಾತಿ, ಧರ್ಮಗಳ ಆಧಾರದ ಮೇಲೆ ನಡೆಯುವ ಸಂಘರ್ಷಗಳಿಗೆ ಪರಿಹಾರಗಳನ್ನು ಒದಗಿಸುತ್ತದೆ.
-  ವ್ಯವಹಾರಕ್ಕೆ ಸಂಬಂಧಿಸಿದ್ದಂತೆ ಪ್ರಾಯೋಗಿಕ ಸಮಸ್ಯೆಗಳಿಗೆ ಕಾರಣ ಕಂಡುಹಿಡಿಯುವುದು: ಸಾಮಾಜಿಕವಾಗಿ ಮಾನವನ ಜೀವನವನ್ನು ಸರಳಗೊಳಿಸಲು ಅನುಕೂಲವಾಗಿರುವ ಸಾಮಗ್ರಿಗಳನ್ನು ಆವಿಷ್ಕರಿಸುವುದು ಮತ್ತು ಬಳಕೆಮಾಡಿಕೊಳ್ಳುವುದು. ಉದಾ: ರೇಡಿಯೋ, ಕಂಪ್ಯೂಟರ್, ವಿದ್ಯುತ್, ದೂರವಾಣಿ, ದೂರದರ್ಶಕ.

## ಅನ್ವಯಿಕ ಸಂಶೋಧನೆ Applied Research

ಒಂದು ಸಮರ್ಪಕ ಕ್ರೀಯೆ ಮತ್ತು ನೀತಿಯ ಅಗತ್ಯವಿರುವ ನೈಜ ಜೀವನದ ಸಮಸ್ಯೆಯ ಪರಿಹಾರಕ್ಕೆ ಕೈಗೊಳ್ಳುವ ಸಂಶೋಧನೆಗೆ ಅನ್ವಯಿಕ ಸಂಶೋಧನೆ ಎನ್ನುವರು. ಈ ಸಂಶೋಧನೆಯು ಸಮಸ್ಯೆ ಮತ್ತು ಕ್ರೀಯೆಯ ಆಧಾರಿತವಾಗಿದ್ದು ಆ ವಿಷಯವನ್ನು ಕುರಿತು ಜ್ಞಾನ ಸಂಪಾದನೆಯಲ್ಲಿ ಅಥವಾ ಹೊಸ ಸಿದ್ಧಾಂತದ ರಚನೆಯಲ್ಲಿ ಸಂಶೋಧನೆಗಳನ್ನು ಕೈಗೊಳುವಾಗ ಅಲ್ಲಿ ಲಭ್ಯವಿರುವ ಜ್ಞಾನವನ್ನು ಮಾನವನ ಉಪಯುಕ್ತತತೆಗಾಗಿ, ಸಮಸ್ಯೆಗೆ ಪರಿಹಾರವನ್ನು ತಕ್ಷಣದಲ್ಲಿ ಒದಗಿಸುವುದು ಮತ್ತು ಜ್ಞಾನ ಸಂವರ್ಧನೆಗಾಗಿ ಹೇಗೆ ಬಳಕೆ ಮಾಡಬೇಕೆನ್ನುವುದನ್ನು ತಿಳಿಸುವುದೆ ಅನ್ವಯಿಕ ಸಂಶೋಧನೆಯಾಗಿದೆ. ಸಮಾಜದಲ್ಲಿ ಮಾನವನು ಎದುರಿಸುವ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸುವ ಮತ್ತು ಜನಕಲ್ಯಾಣವನ್ನು ಸಾಧಿಸುವ ಉದ್ದೇಶವನ್ನು ಒಳಗೊಂಡಿರುವುದನ್ನು ಅನ್ವಯಿಕ ಸಂಶೋಧನೆ ಎನ್ನುವರು. ಉದಾ: ತಂತ್ರಜ್ಞಾನ, ನಿರ್ವಹಣೆ ಮತ್ತು ವಾಣಿಜ್ಯ ಅರ್ಥವಿಜ್ಞಾನಗಳಲ್ಲಿ ಹೆಚ್ಚಾಗಿ ಬಳಸಲಾಗುತ್ತದೆ.

## ಅನ್ವಯಿಕ ಸಂಶೋಧನೆ ಉಪಯೊಗಗಳು

## Uses of Applied Research

ಮಾನವನ ಉಪಯೋಗಕ್ಕೆ ಬರುವಂತಹ, ಜನಕಲ್ಯಾಣ ಅಥವಾ ನಿರ್ದಿಷ್ಟವಾದ ಸಮಸ್ಯೆಗೆ ಸೂಕ್ತವಾದ ಪರಿಹಾರವನ್ನು ಸೂಚಿಸುವ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಕೈಗೊಳ್ಳುವ ಅನ್ವಯಿಕ ಸಂಶೋಧನೆಯ ಉಪಯೋಗಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಲಾಗಿದೆ.

- ಸ್ಥಾಪಿತ ಸಿದ್ಧಾಂತದ ಸಮಾಂತದ ಪರೀಕ್ಷೆ :ಅನ್ವಯಿಕ ಸಂಶೋಧನೆಯು ವೈಜ್ಞಾನಿಕ ಸಾಹಸವಾಗಿದ್ದು ಅಸ್ತಿತ್ವದಲ್ಲಿರುವ ಸಿದ್ಧಾಂತಗಳನ್ನು ಪರೀಕ್ಷೆಗೊಳಪಡಿಸುತ್ತದೆ.
- ಹಳೆಯ ಸಿದ್ಧಾಂತಗಳ ಸಮನ್ವಯದ ಅಗತ್ಯದ ಪ್ರತಿಪಾದನೆ: ಅನ್ವಯಿಕ ಸಂಶೋಧನೆಯು ಹಳೆಯ ಸಿದ್ಧಾಂತಗಳನ್ನು ಸಮನ್ವಯಗೊಳಿಸುತ್ತದೆ. ಉದಾ: ಜನಸಂಖ್ಯಾ ನಿಯಂತ್ರಣ, ನಗರಾಭಿವೃದ್ಧಿ ಯೋಜನೆ, ಮೂಲ ಸೌಕರ್ಯ ನಿರ್ಮಾಣ, ಪರಿಸರ ಸಂರಕ್ಷಣೆ ಎಂಬ ಅಂಶಗಳಿಗೆ ಜನಸಂಖ್ಯಾ ಶಾಸ್ತ್ರ, ಆರೋಗ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಪರಿಸರ ವಿಜ್ಞಾನ ಇತ್ಯಾದಿ ಸಿದ್ಧಾಂತಗಳನ್ನು ಸಮನ್ವಯಗೊಳಿಸುವುದು.
- ಪರಿಕಲ್ಪನಾತ್ಮಕ ಸ್ಪಷ್ಟತೆಗೆ ಸಹಾಯಕ :ಅನ್ವಯಿಕ ಸಂಶೋಧನೆಯು ಪರಿಕಲ್ಪನೆಗಳಿಗೆ ಸ್ಪಷ್ಟವಾದ ರೂಪವನ್ನು ನೀಡುತ್ತದೆ.ಉದಾ: ರೈತರ ಸಮಸ್ಯೆಗಳು, ಜೀತದಾಳು,ಹಕ್ಕೊತ್ತಾಯ, ಸಾಮಾಜಿಕ ಜವಾಬ್ದಾರಿ, ಮಾರಾಟ ಮುಂತಾದ ವಿಷಯಗಳಿಗೆ ಸ್ಪಷ್ಟವಾದ ಕಲ್ಪನೆಗಳು ಇರುವುದಲ್ಲಿ ಅದನ್ನು ಸ್ಪಷ್ಟವಾಗಿ ರೂಪಿಸುತ್ತದೆ.
- ಹೊಸ ಹೊಸ ವಾಸ್ತವತೆಯ ಮೇಲೆ ಸತತವಾಗಿ ಬೆಳಕು ಚೆಲುವಿಕೆ :ಅನ್ವಯಿಕ ಸಂಶೋಧನೆಯು ವಾಸ್ತವತೆಯ ಸತ್ಯಾಂಶದ ಜೊತೆಗೆ ಹೊಸ ಜ್ಞಾನವನ್ನು ಶ್ರೀಮಂತಗೊಳಿಸುತ್ತದೆ.

## HISTORICAL AND EMPIRICAL RESEARCH DESCRIPTIVE, EXPLORATORY, EXPLANATORY & EXPERIMENTAL

## ಐತಿಹಾಸಿಕ ಸಂಶೊಧನೆ HISTORICAL RESEARCH

ಗತಕಾಲದ ಘಟನಾವಳಿಗಳನ್ನು ಅದ್ಯಯನದಿಂದ ಸತ್ಯ ಸತ್ಯತೆಯ ಅದ್ಯಯನದಿಂದ ತಿಳಿದುಕೊಳ್ಳಲು ನಡೆಸುವ ಸಂಶೋಧನೆಯನ್ನು ಐತಿಹಾಸಿಕ ಸಮಶೋಧನೆ ಎನ್ನುವರು.ಅಂದರೆ ಗತಕಾಲದಲ್ಲಿ ನಡೆದ ಘಟನಾವಳಿಗಳ ಸಮಸ್ಯೆಗೆ ಕಾರಣವನ್ನು ಹುಡುಕುವಂತಹ ಒಂದು ವಿಶ್ಲೇಷಣೆಯು ಐತಿಹಾಸಿಕ ಸಂಶೋಧನಾ ಕಾರ್ಯವಾಗಿದೆ. ಸಂಶೋಧನೆಯಲ್ಲಿ ಸಾಮಾಜಿಕ ಸಮಸ್ಯೆಗಳ ಐತಿಹಾಸಿಕ ಹಿನ್ನೆಲೆಯನ್ನು ತಿಳಿಯುವಲ್ಲಿ ಐತಿಹಾಸಿಕ ಸಂಶೋಧನೆಯು ಉಪಯೋಗಿಸಲಾಗುತ್ತದೆ.ಐತಿಹಾಸಿಕ ಸಂಶೋಧನೆಯಲ್ಲಿ ಭೂತಕಾಲದಲ್ಲಿ ನಡೆದು ಹೋದ ಘಟನೆಗಳನ್ನು ನಿಗಮನದ ಪದ್ಧತಿಯ ಮೂಲಕ ಚರ್ಚಿಸಿ, ವಿಶ್ಲೇಷಿಸಿ, ವಿಮರ್ಶಿಸಿ, ವಾಸ್ತವಿಕ ಸಂಗತಿಗಳ ಸತ್ಯಾಂಶಗಳನ್ನು ತಿಳಿದುಕೊಳ್ಳುವುದಾಗಿದೆ. ಇಲ್ಲಿ ಹಿಂದಿನ ಘಟನೆಗಳ ಪ್ರಕ್ರಿಯೆಗಳಿಗೆ ಸಂಬಂಧಿಸಿದ ಅಂಶಗಳನ್ನು ಅಧ್ಯಯನ ಅಥವಾ ತನಿಖೆಯ ಮೂಲಕ ಕಂಡು ಹಿಡಿದು ಅದನ್ನು ದಾಖಲುಗೊಳಿಸುವ ಹಾಗೂ ವಿಶ್ಲೇಷಿಸುವುದನ್ನು ಮತ್ತು ಇತರರಿಂದ ಅವಲೋಕಿಸಿ ಬರೆಯುಲ್ಪಟ್ಟ ವರದಿಗಳು ದೊರೆಯುವ ಸಾಕ್ಷ್ಯಗಳು,

ವಸ್ತುನಿಷ್ಠತೆಯುಳ್ಳ ವಿಮರ್ಶೆಗಳಿಂದ ಕೂಡಿರುವುದಾಗಿದೆ. ಉದಾಹರಣೆಯಾಗಿ ಪ್ರಾಚೀನ ಕಾಲದಲ್ಲಿ ಭಾರತದಲ್ಲಿ ಅಸ್ತಿತ್ವದಲ್ಲಿರುವ ಅನಿಷ್ಟ ಪದ್ಧತಿಗಳು ಮತ್ತು ಅದರ ಪರಿಹಾರಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳ ಬಗ್ಗೆ ತಿಳಿದುಕೊಂಡು ಪ್ರಸ್ತುತ ಸಮಾಜದಲ್ಲಿ ಅದರಿಂದಾದ ಪ್ರಭಾವಗಳನ್ನು ಅರಿಯಬಹುದು. ಉದಾ: ಸ್ತ್ರೀಯರಿಗೆ ಒತ್ತಾಯಪೂರ್ವಕವಾಗಿ ಸತಿಪದ್ದತಿ ಅನುಸರಿಸಬೇಕಿತ್ತು, ದಲಿತರಿಗೆ ದೇವಾಲಯ ಪ್ರವೇಶ ನಿರಾಕರಣೆ, ಅಸ್ಪೃಷ್ಯತೆಯ ಆಚರಣೆ, ಕೆಳಜಾತಿಯವರೇ ದೇವದಾಸಿಯರಾಗುವ ಪದ್ದತಿ, ಸ್ತ್ರೀಯರಿಗೆ ಪೂಜೆಯ ಹಕ್ಕು ನಿರಾಕರಣೆ, ಬೆತ್ತಲೆ ಸೇವೆ, ಮುಂತಾದವುಗಳು ಅಸ್ತತ್ವದಲ್ಲಿದ್ದವು. ಐತಿಹಾಸಿಕ ಸಂಶೋಧನೆಯು ಗತಕಾಲದ ವಸ್ತು ವಿಷಯವನ್ನು ತಿಳಿಯುವುದರ ಜೊತೆಗೆ ವರ್ತಮಾನ ಕಾಲದ ಅದೇ ವಿಷಯವನ್ನು ಸ್ಮರಣೆ ಮಾಡಿಕೊಂಡು ಹೋಲಿಕೆ ಮಾಡುತ್ತೇವೆ. ಇದರಿಂದ ವರ್ತಮಾನವನ್ನು ಕುರಿತು ನಮ್ಮ ತಿಳುವಳಿಕೆ ಬೆಳೆಯುತ್ತದೆ. ಹಾಗಾಗಿ ಐತಿಹಾಸಿಕ ಸಂಶೋಧನೆಯು ಭೂತಕಾಲ ವರ್ತಮಾನ ಕಾಲ ಭವಿಶ್ಯತ್‌ಗಳನ್ನು ಅರ್ಥೈಸಲು , ಊಹಿಸಲು ಸಹಾಯಕವಾಗಿದೆ. ಐತಿಹಾಸಿಕ ಸಂಶೋಧನೆಯು ಶುದ್ಧ ಮತ್ತು ಅನ್ವಯಿಕ ಸಂಶೋಧನೆಗಳಿಗೂ ಅಗತ್ಯವಾಗಿದೆ. ಐತಿಹಾಸಿಕ ಸಂಶೋಧನೆಯು ವರ್ತಮಾನದ ಸಮಸ್ಯೆಗಳು ಮತ್ತು ಪರಿವರ್ತನೆಗೊಳ್ಳುತ್ತಿರುವ ವಿದ್ಯಮಾನಗಳನ್ನು ಅರ್ಥೈಯಿಸಿಕೊಳ್ಳು ಭೂತಕಾಲದ ಜ್ಞಾನ ಅಗತ್ಯವಾಗಿದೆ.

## ಐತಿಹಾಸಿಕ ಮಾಹಿತಿಯ ಮೂಲಗಳು ಈ ಕೆಳಗಿನಂತಿವೆ
## SOURCES OF HISTORICAL RESEARCH

ಪುಸ್ತಕಗಳು, ಡೈರಿಗಳು, ವೃತ್ತಪತ್ರಿಕೆಗಳು, ತಾಳೆಗರಿ, ಆತ್ಮಚರಿತ್ರೆ , ಚಿತ್ರಗಳು, ಪತ್ರಗರದಲ್ಲಿರುವ ಕಡತಗಳು, ಐತಿಹಾಸಿಕ ಪಳೆಯುಳಿಕೆಗಳ,ವ್ಯಕ್ತಿಯ ನೆನಪುಗಳು, ಐತಿಹ್ಯಗಳು , ನಂಬಿಕೆಗಳು, ಹಳೆಯ ಲಾವಣಿಗಳು, ಗಾದೆಯ ಮಾತುಗಳು, ಶ್ಲೋಕಗಳು, ನುಡಿಗಟ್ಟುಗಳು, ಶಾಸ್ತ್ರ ಪುರಾಣಗಳು, ದಂತಕಥೆಗಳು ನಾಟಕಗಳು.

## ಐತಿಹಾಸಿಕ ಸಂಶೋಧನೆಯು ಅವಶ್ಯಕತೆಗಳು
## NEED OF HISTORICAL RESEARCH

ಐತಿಹಾಸಿಕ ಸಂಶೋಧನೆಗಳಿಗೆ ಅಗತ್ಯವಾಗಿರುವ ಮಾಹಿತಿಯ ಮೂಲಗಳು ಮತ್ತು ವೈವಿಧ್ಯಮಯವಾಗಿವೆ. ಈ ಐತಿಹಾಸಿಕ ಅಧ್ಯಯನಗಳು ಶುದ್ಧ ಮತ್ತು ಅನ್ವಯಿಕ ಸಂಶೋಧನೆಗಳಿಗೂ ಅಗತ್ಯವಾಗಿರುವದನ್ನು ಈ ಕೆಳಗಿನ ಅಂಶಗಳಲ್ಲಿ ನೋಡಬಹುದು.

- ಪ್ರಾಚೀನ ಶೈಕ್ಷಣಿಕ ಘಟನೆ ಸ್ಥಿತಿಗತಿ ಆಚರಣೆ ಮತ್ತು ಪ್ರವೃತ್ತಿಗಳ ಬಗ್ಗೆ ನಿಖರವಾದ ಮಾಹಿತಿಯನ್ನು ಪಡೆಯಬಹುದು.
- ದಲಿತ ಮತ್ತು ಶೂದ್ರ ಜನಾಂಗದವರು ಶತದಡ್ಡರಾಗಿತ್ತಾರೆನ್ನುವುದು ಸಾರ್ವತ್ರಿಕ ಅಭಿಪ್ರಾಯವಾಗಿದೆ. ಇಲ್ಲಿ ಈ ಜನಾಂಗಗಳು ಶಿಕ್ಷಣದಿಂದ ವಂಚಿತರಾಗಿರುವುದು ತಿಳಿದುಬರುತ್ತದೆ.

- ಜಾತಿ ವ್ಯವಸ್ಥೆಯಿಂದಾಗಿ ಅಂತರ್ಜಾತಿಯ ವಿವಾಹಕ್ಕೆ ಆಸ್ಪದ ಇಲ್ಲದಿರುವುದು.
- ಅಂತರ್ಜಾತಿ ವಿವಾಹದಿಂದ ಜನ್ಮ ಪಡೆದ ಮಕ್ಕಳು ಬುದ್ದಿವಂತರಾಗಿ ರೂಪುಗೊಳ್ಳುತ್ತಾರೆಂದು ಅಧ್ಯಯನಗಳು ತಿಳಿಸುತ್ತವೆ.

## ಐತಿಹಾಸಿಕ ಸಂಶೋಧನೆಯ ಪ್ರಕಾರಗಳು TYEPS OF HISTORICAL RESEARCH

ಐತಿಹಾಸಿಕ ಸಂಶೋಧನೆಯನ್ನು ಶೈಕ್ಷಣಿಕ ಧ್ಯೇಯಗಳು ಮತ್ತು ಸಾಂಸ್ಥಿಕ ಸಂಶೋಧನೆಯ ಆಧಾರದ ಮೇಲೆ 4 ಪ್ರಕಾರಗಳಲ್ಲಿ ವಿಂಗಡಿಸಬಹುದು

1. ಜೀವನ ಚಾರಿತ್ರಿಕ ಸಂಶೋಧನೆ
2. ಶೈಕ್ಷಣಿಕ ಧ್ಯೇಯಗಳು ಮತ್ತು ಆದರ್ಶಗಳಿಗೆ ಸಂಬಂಧಿಸಿದ ಸಂಶೋಧನೆಗಳು
3. ಸಾಂಸ್ಥಿಕ ಸಂಶೋಧನೆ: ಶೈಕ್ಷಣಿಕ ಸಂಸ್ಥೆಗಳು, ಸ್ಥಾಪನೆ ಮತ್ತು ಬೆಳವಣಿಗೆಯ ಕುರಿತು ಅಧ್ಯಯನ ಮಾಡುವುದು ಉದಾ: ನಳಂದ, ತಕ್ಷಶಿಲೆ
4. ಶಾಸನ ಸಂಶೋಧನೆ: ಶಿಕ್ಷಣಕ್ಕೆ ಸಂಭಂಧಿಸಿದ್ದು

## ಐತಿಹಾಸಿಕ ಸಂಶೋಧನೆಯ ಗುಣಲಕ್ಷಣಗಳು CHARACTERISTICS OF HISTORICAL RESEARCH

ಐತಿಹಾಸಿಕ ಸಂಶೋಧನೆಯು ವಿಷಯ ಜ್ಞಾನವನ್ನು ,ಸಂಶೋಧನೆಯ ಕಾರಣ ಪರಿಣಾಮಗಳನ್ನು ಗತಕಾಲದ ಮಾಹಿತಿಯ ಆಧಾರದ ಮೇಲೆ ಭವಿಷ್ಯ ಸೂಚಕಗಳನ್ನು ರೂಪಿಸುವಂತಹ ಗುಣಗಳನ್ನು ಒಳಗೊಂಡಿದೆ

1. ಐತಿಹಾಸಿಕ ಸಂಶೋಧನೆಯು ಆಳವಾದ ವಿಷಯ ಜ್ಞಾನವನ್ನು ಪಡೆಯುವುದರ ಜೊತೆಗೆ ಪಾಂಡಿತ್ಯದ ಬಗ್ಗೆ ಗೌರವವನ್ನು ಶಿಕ್ಷಕರ ಬಗ್ಗೆ ಪೂಜ್ಯ ಭಾವನೆಯನ್ನು ಪ್ರೇರೇಪಿಸುತ್ತದೆ.
2. ಇತಿಹಾಸ ಜ್ಞಾನ ಮತ್ತು ಸಂಶೋಧನೆಯ ಕಾರಣ ಪರಿಣಾಮಗಳ ಸಂಬಂಧವನ್ನು ವಿಮರ್ಶಾತ್ಮಕವಾದ ದೃಷ್ಟಿಕೋನದಿಂದ ಸೃಷ್ಟಿಸುತ್ತದೆ.
3. ಗತಕಾಲದ ಮಾಹಿತಿಯ ಆಧಾರದ ಮೇಲೆ ಭವಿಷ್ಯ ಸೂಚಕಗಳನ್ನು ಊಹಿಸಲು ಸಹಕಾರಿಯಾಗಿವೆ.

## ಐತಿಹಾಸಿಕ ಸಂಶೋಧನೆಯ ಹಂತಗಳು STAGES OF HISTORICAL RESEARCH

ಐತಿಹಾಸಿಕ ಸಂಶೋಧನೆಯು ಗತಕಾಲದ ವಿಷಯವನ್ನು ಆಧಾರವಾಗಿಟ್ಟುಕೊಂಡು ಲಭ್ಯವಿರುವ ದತ್ತಾಂಶಗಳ ಹಂತ ಹಂತವಾಗಿ ಉಪಯೋಗಿಸಿಕೊಂಡು ಜಾಗರೂಕತೆಯಿಂದ ಹಾಗೂ ವಸ್ತುನಿಷ್ಟ ದೃಷ್ಟಿಯಿಂದ ವಿಷಯವನ್ನು ಗ್ರಹಿಸಿ ಪ್ರಸ್ತುತಪಡಿಸಲು ಈ ಕೆಳಗಿನ ಹಂತಗಳನ್ನು ಅನುಸರಿಸಬಹುದು

1. ಸಮಸ್ಯೆಯನ್ನು ಆಯ್ಕೆ ಮಾಡಿಕೊಳ್ಳುವುದು
2. ಸಂಶೋಧನಾ ವಿಷಯದ ವ್ಯಾಪ್ತಿಯನ್ನು ನಿರ್ಧರಿಸುವುದು
3. ಮೂಲಾಧಾರಗಳ ಗುರುತಿಸುವುದು ಮತ್ತು ವಿಶ್ಲೇಷಣೆ ಮಾಡುವುದು

4. ಸಾಕ್ಷ್ಯಾಧಾರಗಳ ಸಂಗ್ರಹಣೆ
5. ಸಾಕ್ಷ್ಯಾಧಾರಗಳ ವಿಮರ್ಶೆ
6. ಟಿಪ್ಪಣಿ ಮಾಡುವಿಕೆ ಮತ್ತು
7. ಅರ್ಥವಿವರಣೆ ಮಾಡುವುದು.
8. ಪ್ರಾಕಲ್ಪನೆಗಳ ರಚನೆ ಮತ್ತು
9. ಫಲಿತಾಂಶಗಳ ಪಟ್ಟಿ ಮಾಡುವುದು
10. ಸಂಶೋಧನಾ ವರದಿಯನ್ನು ಸಿದ್ಧಪಡಿಸಿಕೊಳ್ಳುವುದು.

## ಅನುಭಾವ್ಯಕ ಸಂಶೊಧನೆ EMPIRICAL RESEARCH

ಒಂದು ಸಂಶೊಧನೆ ವಿಷಯವನ್ನು ವಿಶ್ಲೆಷಿಸಲು ಸೂಕ್ತವಾದ ಸಾಕ್ಷ್ಯಧಾರಗಳನ್ನು ಆಧಾರಿಸಿ ದೃಡಿಕರಿಸಲು ಮತ್ತು ಫಲಿತಾಂಶಗಳನ್ನು ಪುನರಪರೀಕ್ಷೆಗೆ ಒಳಪಡಿಸಲು ಅವಕಾಶವಿರುವ ಸಂಶೊಧನೆಯನ್ನು ಅನುಭಾವ್ಯಕ ಸಂಶೋಧನೆ ಎನ್ನುವರು. ಈ ಸಂಶೊಧನೆಯು ಅನುಭಾವ ಮತ್ತು ಅವಲೋಕನದ ಆಧಾರದ ಮೇಲೆ ನಡೆಸುವ ಸಂಶೊಧನೆ ಯಾಗಿದೆ.

## ವಿವರಣಾತ್ಮಕ ಸಂಶೋಧನೆ DESCRIPTIVE & EXPLANATORY RESEARCH

ಒಂದು ವಿಷಯವನ್ನು ಯೋಚಿಸಿ ಉದ್ದೇಶಗಳ ಧೋರಣೆಗಳ ಸನ್ನಿವೇಶಗಳ ಪರಿಸ್ಥಿತಿಗಳನ್ನು ಅಥವಾ ಘಟನೆಗಳಿಗೆ ಸಂಬಂದಿಸಿದ ವಾಸ್ತವಿಕ ಚಿತ್ರಣವನ್ನು ಕೈಗೊಳುವ ಸಂಶೋಧನೆಯನ್ನು ವಿವರಣಾತ್ಮಕ ಸಂಶೋಧನೆ ಎನ್ನುವರು. ಉದಾಹರಣೆಗೆ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸಿದ ವಿವಾದದ ಕುರಿತಾದ ಮಾಹಿತಿಯನ್ನು ಸಮೀಕ್ಷೆಯ ಮೂಲಕ ಸಂಗ್ರಹಿಸಿ ಇರುವ ವಸ್ತು ಸ್ಥಿತಿಯನ್ನು ವಿಶ್ಲೇಷಿಸುವುದು ಮತ್ತು ವಿವರಿಸುವುದನ್ನು ವಿವರಣಾತ್ಮಕ ಸಂಶೋಧನೆ ಎಂದು ಕರೆಯುತ್ತಾರೆ. ಇಲ್ಲಿ ವಿಷಯವನ್ನು ವಿವರಿಸುವಾಗ ಬೇರೆ ವಿಷಯದ ಚರಾಂಶ ಅಥವಾ ಚಲಕಗಳನ್ನು ಪರಸ್ಪರ ಹೋಲಿಸಿ ನೋಡುವ ಮತ್ತು ಚರಾಂಶಗಳ ನಡುವಿನ ಸಂಬಂಧವನ್ನು ಕಂಡು ಹಿಡಿಯಲು ಸಂಶೋಧಕನು ಪ್ರಯತ್ನಿಸಿ ವಿವರಿಸಬೇಕಾಗುತ್ತದೆ. ಉದಾ: ಜನಸಂಖ್ಯೆ ಏರಿಕೆ ಮತ್ತು ಸಾಕ್ಷರತೆಯ ಮಧ್ಯದಲ್ಲಿರುವ ಸಂಬಂಧವನ್ನು ಕಂಡು ಹಿಡಿದಾಗ ಭಾರತ ದೇಶದಲ್ಲಿ ಜನಸಂಖ್ಯೆ ಏರಿದಂತೆ ಸಾಕ್ಷರತೆಯು ಹೆಚ್ಚಾಗುತ್ತಿದೆ ಎಂಬ ಫಲಿತಾಂಶವು ಎರಡು ಚರಾಂಶಗಳ ಏರಿಕೆಯ ಪ್ರಮಾಣ ಒಂದೇ ಸಮನಾಗಿರುವುದು ತಿಳಿದುಬರುತ್ತದೆ. ಒಂದು ವಿಷಯವನ್ನು ವಿವರಣಾತ್ಮಕವಾಗಿ ವಿಶ್ಲೆಷಣೆ ಮಾಡುವಾಗ ಅದು ಬೇರೆ ಬೇರೆ ಚರಾಂಶ ಸಲಕರಣೇಗಳನ್ನು ಪರಸ್ಪರ ಹೊಲಿಸಿ ನೋಡುವ ಕೆಲಸವನ್ನು ಇಲ್ಲಿ ಮಾಡಲಾಗುತ್ತದೆ.

ಸಂಶೋಧಕನು ವಿಷಯಕ್ಕೆ ಕುರಿತಂತೆ ಯಾರು ಯಾವಾಗ, ಎಲ್ಲಿ, ಹೇಗೆ, ಎಂಬ ಹಲವಾರು ಪ್ರಶ್ನೆಗಳಿಗೆ ಉತ್ತರವನ್ನು ಕಂಡು ಹಿಡಿದು ವಸ್ತು ವಿಷಯದ ನೈಜವಾದ ಅಥವಾ ಸತ್ಯಾಂಶ ಶೋಧನೆಯ ಮಾರ್ಗದಲ್ಲಿ ವಿಷಯವನ್ನು ಪರಿಶೀಲಿಸುವ ಹಲವಾರು ಆಯಾಮಗಳನ್ನು ಸರಳವಾದ ವಿಧಾನದಲ್ಲಿ ವೀಕ್ಷಿಸಿ ವಿವರಿಸುವುದಾಗಿದೆ.

## ವಿವರಣಾತ್ಮಕ ಸಂಶೋಧನೆಯ ಉದ್ದೇಶಗಳು
## OBJCTIVES OF DESCRIPTIVE RESEARCH

ಸಂಶೋಧನೆಯ ಪರಿಕಲ್ಪನೆಗಳನ್ನು ಪರೀಶೀಲಿಸುತ್ತದೆ: ಸಂಶೋಧನಾ ವಿಷಯದ ಪ್ರಸ್ತುತ ವಸ್ತು ಸ್ಥಿತಿಯನ್ನು ಮತ್ತು ಅದರ ನಿಲುವು ಸ್ಥಾನಮಾನದ ಬಗ್ಗೆ ಪ್ರಯೋಗಾತ್ಮಕವಾಗಿ ಮತ್ತು ವೀಕ್ಷಣೆಯಿಂದ ವಿಶ್ಲೇಷಿಸುವುದಾಗಿದೆ

ಕ್ರೀಯಾ ಯೋಜನೆಗೆ ಸಹಕಾರಿಯಾಗಿದೆ: ಸಾಮಾಜಿಕ ಕ್ರಿಯಾ ಯೋಜನೆ ಮತ್ತು ಪಾಲಿಸಿ ನೀತಿ ನಿಯಮಗಳ ರೂಪಿಸಲು ಮತ್ತು ಅದರ ಸ್ವರೂಪಕ್ಕೆ ತಳಹದಿಯನ್ನು ಒದಗಿಸುವುದಾಗಿದೆ.

ಸಂಶೋಧನೆಗೆ ಮಾದರಿಯಾಗಿದೆ: ಮೂಲ ಸಂಶೋಧನೆ ಮಾಡಲು ಅಡಿಪಾಯ ಹಾಕಲು ಮಾದರಿಯಾಗಿದೆ.

## ವಿವರಣಾತ್ಮಕ ಸಂಶೋಧನೆಯ ಮಿತಿಗಳು
## LIMITATIONS OF DESCRIPTIVE RESEARCH

ವಿವರಣಾತ್ಮಕ ಸಂಶೋಧನೆಯು ಸಂಶೋಧನೆಯ ಸಂದರ್ಭದಲ್ಲಿ ಸಂಶೋಧನಆ ವಿಷಯದ ಸತ್ಯಾಂಶವನ್ನು ಕಂಡುಹಿಡಿದು ವರ್ತಮಾನದ ಕಾಲದ ವಿಷಯವನ್ನಾಗಿ ಪರಿವರ್ತಿಸಲು ಈ ಕೆಳಗಿನ ಅಂಶಗಳನ್ನು ಮಿತಿಯೊಳಗಿರುವುದು

- ಈ ಸಂಶೋಧನೆಯು ಎಲ್ಲಾ ಸಂದರ್ಭಗಳಿಗೆ ಅನ್ವಯಿಸುವುದಿಲ್ಲ.
- ವರ್ಣನೆಯು ವಸ್ತು ವಿಷಯವನ್ನು ಮಾತ್ರ ಉಲ್ಲೇಖಿಸುತ್ತಾ ಸತ್ಯಾಂಶವನ್ನು ಹೊರಹಾಕುತ್ತದೆ.
- ಭೂತ ಮತ್ತು ಭವಿಷ್ಯತ್ತಿನ ಸಮಸ್ಯೆಗಳ ಉಲ್ಲೇಖವಿದ್ದರೂ ವರ್ತಮನ ಕಾಲದ ವಿಷಯವನ್ನು ಪರಿಗಣಿಸಬೇಕು.
- ಸಂಖ್ಯಾಶಾಸ್ತ್ರವನ್ನು ಅತಿಯಾಗಿ ಮತ್ತು ಅಗತ್ಯವಾಗಿ ಬಳಸಬಾರದು.

## ವಿವರಣಾತ್ಮಕ ಸಂಶೋಧನೆಯ ಗುಣಲಕ್ಷಣಗಳು
## CHARACTERISTRICS OF DESCRIPTIVE RESEARCH

ವಿವರಣಾತ್ಮಕ ಸಂಶೋಧನೆಯು ಸಂಶೋಧನಾ ವಿಷಯದ ಸಂಗತಿಗಳನ್ನು ಕಂಡುಹಿಡಿದು ಜಾಗರೂಕತೆಯಿಂದ ಹಾಗೂ ವಸ್ತುನಿಷ್ಟ ದೃಷ್ಟಿಯಿಂದ ವಿಷಯವನ್ನು ವಿವರಿಸಲು ಈ ಕೆಳಗಿನ ಹಂತಗಳನ್ನು ಅನುಸರಿಸಬಹುದು

- ದೊಡ್ಡ ಗಾತ್ರದ ನಮೂನೆ ಇರುತ್ತದೆ.
- ಸಾಮಾನೀಕರಣದ ನಮೂನೆಯಾಗಿರುತ್ತದೆ.
- ಸಾಮಾನಿಕೃತ ಸಾಧನೆಗಳನ್ನು ಉಪಯೋಗಿಸಲಾಗುತ್ತದೆ

- ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆಯನ್ನು ಕೈಗೊಳ್ಳಲಾಗುತ್ತದೆ.
- ಚಲಕಗಳನ್ನು ಅಥವಾ ಚರಾಂಶಗಳನ್ನು ಪರಸ್ಪರ ಹೋಲಿಸಿ ನೋಡಲಾಗುತ್ತದೆ

## ವಿವರಣಾತ್ಮಕ ಸಂಶೋಧನೆಯ ಹಂತಗಳು STAGES OF DESCRIPTIVE RESEARCH

ವಿವರಣಾತ್ಮಕ ಸಂಶೋಧನೆಯು ಸಮಾಜದ ಸತ್ಯಸಂಗತಿಯನ್ನು ಕಂಡುಹಿಡಿಯುವಲ್ಲಿ ಸಂಶೋಧಕನು ಸಂಶೋಧನಾ ವಿನ್ಯಾಸದ ದೃಷ್ಟಿಯಿಂದ ಸಮಸ್ಯೆಯನ್ನು ಆಯ್ಕೆ ಮಾಡಿಕೊಂಡು ನಿರೂಪಿಸಿ, ಸಾಧನ ಸಲಕರಣೆಗಳ ಮೂಲಕ ಸಂಗ್ರಹಿಸಿದ ದತ್ತಾಂಶಗಳನ್ನು ವಿವರಿಸಿ ವರದಿಯನ್ನು ತಯಾರಿಸಲು ಈ ಕೆಳಗಿನ ಹಂತಗಳನ್ನು ಅನುಸರಿಸಬಹುದು.

1. ಸಮಸ್ಯೆಯನ್ನು ಆಯ್ಕೆ ಮಾಡಿಕೊಳ್ಳುವುದು
2. ಸಮಸ್ಯೆಯನ್ನು ನಿರೂಪಿಸಿ, ಅರ್ಥವಿವರಣೆಯನ್ನು ವಿಶ್ಲೇಷಿಸುವುದಾಗಿದೆ.
3. ದತ್ತಾಂಶಗಳನ್ನು ಆಯ್ಕೆ ಮಾಡಿಕೊಳ್ಳುವುದು ಮತ್ತು ಅಭಿವೃದ್ಧಿಪಡಿಸುವುದಾಗಿದೆ
4. ಸಾಧನ ಸಲಕರಣೆಗಳನ್ನು ಆಯ್ಕೆ ಮಾಡಿಕೊಳ್ಳುವುದು
5. ಪ್ರತಿದರ್ಶಿಯನ್ನು ಆಯ್ಕೆ ಮಾಡಿಕೊಳ್ಳುವುದು
6. ಸಂಗ್ರಹಿಸಿ ದತ್ತಾಂಶಗಳನ್ನು ವಿವರಿಸುವುದು.
7. ಸಂಶೋಧನಾ ವರದಿಯನ್ನು ಸಿದ್ದಪಡಿಸಿಕೊಳ್ಳುವುದು.

## ವಿವರಣಾತ್ಮಕ ಸಂಶೋಧನೆಯ ಅಧ್ಯಯನ ವಿಷಯಗಳು
## CONCEPTS OF DESCRIPTIVE RESEARCH

ವಿವರಣಾತ್ಮಕ ಸಂಶೋಧನೆಯು ಸಂಗ್ರಹಿಸಿದ ಮಾಹಿತಿಯು ಒಳಗೊಂಡಿರುವ ಚಲಕ ಅಥವಾ ಚರಾಂಶಗಳನ್ನು ವಿಶ್ಲೇಷಿಸುವುದು ಅಥವಾ ವಿವರಿಸುವದಕ್ಕಾಗಿ ಅನುಸರಿಸುವ ಹಲವು ವಿಧಾನಗಳನ್ನು ಈ ಕೆಳಗಿನ ಉಪ ಅಧ್ಯಯನದ ಮೂಲಕ ಬಳಸಿಕೊಳ್ಳಲಾಗುತ್ತದೆ.

- ಸಮೀಕ್ಷಾ ಅಧ್ಯಯನ
- ವ್ಯಕ್ತಿ ಅಧ್ಯಯನ
- ವೃತ್ತಿ ಅಧ್ಯಯನ
- ವಿಕಾಸಾತ್ಮಕ ಅಧ್ಯಯನ
- ಸಹಸಂಬಂಧ ಅಧ್ಯಯನ
- ತೌಲನಿಕ ಅಧ್ಯಯನ

## ಪರಿಶೋಧನಾತ್ಮಕ ಸಂಶೋಧನೆ EXPLORATORY RESEARCH

ಯಾವ ವಿಷಯಗಳನ್ನು ಪರಿಸೋಧನೆಗೆ ಒಳಪಡಿಸುವುದು ನಿರ್ಧರಿಸುತ್ತದೆ ರೋಗಿಯ ಲಕ್ಷಣದ ಮೇಲೆ ಕೇವಲ ಯಾವ ರೀತಿ ಚಿಕಿತ್ಸೆ ನಡೆಯುತ್ತದೆ ಯೆಂಬುವುದನು ನೋಡುವುದೆ ಆಗಿದೆ. ಈ ಹಿಂದೆ ಸಂಶೊಧನೆಗೆ ಒಳಪಡಿಸಲಾದ ವಿಷಯಗಳನ್ನು ಆಯ್ಕೆ ಮಾಡಿಕೊಂಡು ನಿರ್ದಿಷ್ಟ ಸಮಸ್ಯೆಗೆ ಸರ್ಮಪಕವಾದ ಮಾಹಿತಿಯನ್ನು

ಸಂಗ್ರಹಿಸಿ ಸ್ಪಷ್ಟವಾದ ಪರಿಕಲ್ಪನೆಗಳನ್ನು ಸೂಚಿಸುವುದನೇ ಪರಿಶೋಧನಾತ್ಮಕ ಸಂಶೊಧನೆಯಾದೆ.ಅಂದರೆ ಇಲ್ಲಿ ಗೊತ್ತಿಲ್ಲದ ವಿಷಯಗಳನ್ನು ಕುರಿತು ಆರಂಭಿಕ ಅಧ್ಯಯನಗಳನ್ನು ಮಾಡಲಾಗುತ್ತದೆ. ಈ ಸಂಶೋಧನೆಯು ಹೊಸದನ್ನು ಕಂಡು ಹಿಡಿಯುವ ಮಾರ್ಗದಲ್ಲಿ ಸಂಶೋಧನೆಗಳನ್ನು ಕೈಗೊಳ್ಳಲಾಗುತ್ತದೆ. ಉದಾಹರಣೆಗೆ ಕರೋನಾ ವೈರಸ್‌ನ ಚಿಕಿತ್ಸೆಗಾಗಿ ಔಷಧಿಯನ್ನು ಕಂಡು ಹಿಡಿಯುವ ಅಧ್ಯಯನ ಮಾಡುವುದು, ಏಡ್ಸ್ ರೋಗದ ಬಗೆಗಿನ ಅಧ್ಯಯನ ಮಾಡುವುದು, ಕೋಲಂಬಸ್‌ರು ಕೈಗೊಂಡ ಸಮುದ್ರಯಾನವನ್ನು ಪರಿಶೋಧನಾತ್ಮಕ ಸಂಶೋಧನೆಯ ಎನ್ನಲಾಗಿದೆ. ಹೀಗೆ ಪರಿಶೋಧನಾತ್ಮ ಸಂಶೋಧನೆಯು ಹೊಸವಸ್ತು ವಿಷಯದ ವಿಚಾರಗಳನ್ನು ಕಂಡುಕೊಳ್ಳುವ ಬಗ್ಗೆ ವಿಶಿಷ್ಟವಾದ ಒಳನೋಟಗಳನ್ನು ಪಡೆಯಲು ಒತ್ತು ನಿಡುವುದು. ಈ ಸಂಶೋಧನೆಯ ಕ್ರಮದಲ್ಲಿ ಮಾರ್ಪಾಡುಗಳನ್ನು ಮಾಡಿಕೊಳ್ಳಲು ಈ ಕೆಳಗಿನ ವಿಧಾನಗಳನ್ನು ಪ್ರಸ್ತಾಪಿಸಲಾಗಿದೆ.

- ಸಂಬಂಧಿತ ಸಾಹಿತ್ಯದ ಸಮೀಕ್ಷೆ
- ಅನುಭವದ ಸಮೀಕ್ಷೆ
- ಒಳನೋಟ ಪರಿಶೋಧಕ

ಸಂಬಂಧಿತ ಸಾಹಿತ್ಯದ ಸಮೀಕ್ಷೆ REVIEW OF LITERATURE

ಈ ಮೊದಲು ಇತರರು ಮಾಡಿರುವ ಸಂಶೋಧನೆಗಳು ಸೃಜನಶೀಲ ಬರಹಗಾರರ ವಿಚಾರಗಳು ಹಾಗೂ ಈಗಾಗಲೆ ಸ್ಥಾಪಿಸಲ್ಪಟ್ಟ ಪ್ರಾಕಲ್ಪನೆಗಳು ಹೊಸ ಅಧ್ಯಯನಕ್ಕೆ ಮಾರ್ಗದರ್ಶನ ನೀಡುವುದರ ಜೊತೆಗೆ ಹೊಸ ಪ್ರಾಕಲ್ಪನೆಗಳನ್ನು ಸ್ಥಾಪಿಸಲು ಸಹಾಯಕವಾಗುತ್ತದೆ.

ಅನುಭವದ ಸಮೀಕ್ಷೆ

ಸಮೀಕ್ಷೆ ಮಾಡುವುದರಿಂದ ಹೊಸ ವಿಚಾರಗಳ ಜೊತೆಗೆ ಅಧ್ಯಯನದ ಪರಿವರ್ತಗಳ ನಡುವಿನ ಸಂಬಂಧಗಳ ಬಗ್ಗೆ ಉಪಯುಕ್ತವಾದ ದೃಷ್ಟಕೋಣ ಅಥವಾ ಒಳನೋಟ ದೊರಕುತ್ತದೆ. ಆದರೆ ಇಲ್ಲಿ ಮಾಹಿತಿ ಜಾಗರೂಕತೆಯಿಂದ ಸಂಗ್ರಹಿಸಿ ಅನುಭವಿಗಳೊಡನೆ ಚರ್ಚಿಸುವುದು ಸೂಕ್ತವಾಗಿರುತ್ತದೆ.

ಒಳನೋಟ ಪರಿಶೋಧಕ

ಸಂಶೋಧಕನು ತನ್ನ ವಿಷಯದ ಬಗ್ಗೆ ಒಳನೋಟಗಳನ್ನು ಪಡೆಯುವ ಸಲುವಾಗಿ ಹಳೆಯ ದಾಖಲೆಗಳ, ಸಾಹಿತ್ಯ , ಪ್ರಶ್ನಾವಳಿ ವಿಧಾನ, ಸಂದರ್ಶನ ವಿಧಾನ, ಜ್ಞಾನ ಕೊರತೆಯಿರುವ ವಿಷಯಗಳನ್ನು ಅಧ್ಯಯನದಿಂದ ತಿಳಿದುಕೊಳ್ಳಬಹುದು. ಹಾಗೂ ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ಸೂಕ್ತವಾದ ಪ್ರಾಕಲ್ಪನೆಯನ್ನು ಸೂಚಿಸಲು ಸಹಕಾರಿಯಾಗಿದೆ. ಉದಾ: ಅಪರಿಚಿತರು ನೀಡುವ ಪ್ರತಿಕ್ರಿಯೆಗಳು, ಬೇರೆ ಬೇರೆ ಅಂತಸ್ತುಗಳಲ್ಲಿರುವ ಪ್ರತಿಕ್ರಿಯೆಗಳು.

## ಪರಿಶೋಧನಾತ್ಮಕ ಸಂಶೋಧನೆ ಉದ್ದೇಶಗಳು
## OBJECTIVES OF EXPLORATORY RESEARCH

ಪರಿಶೋಧನಾತ್ಮಕ ಸಂಶೋಧನೆಯು ಸಂಶೋಧನೆಯಲ್ಲಿ ನಿರ್ದಿಷ್ಟ ಸಮಯದಲ್ಲಿ ಸಮಸ್ಯೆಯನ್ನು ರೂಪಿಸುವುದು ಮತ್ತು ಹೊಸ ಪರಿಕಲ್ಪನೆಗಳನ್ನು ಸಂಗ್ರಹಿಸುವುದು

1. ನಿರ್ದಿಷ್ಟ ಸಮಸ್ಯೆಯ ಬಗ್ಗೆ ಜ್ಞಾನವನ್ನು ಹೆಚ್ಚಿಸುವುದು
2. ಸಮರ್ಥವಾಗಿ ಸಮಸ್ಯೆಯ ಪರಿಹಾರವನ್ನು ರೂಪಿಸುವುದು
3. ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ಸ್ಪಷ್ಟವಾಧ ಪರಿಕಲ್ಪನೆ ರೂಪಿಸುವುದು.

## ಪರಿಶೋಧನಾತ್ಮಕ ಸಂಶೋಧನೆ ಉಪಯೋಗಗಳು
## USES OF EXPLORATORY RESEARCH

ಸಂಶೋಧನಾ ವಿಷಯದ ಬಗ್ಗೆ ಜ್ಞಾನವನ್ನು ಹೆಚ್ಚಿಸುವುದು ಮತ್ತು ಸಂಗ್ರಹಿಸಿದ ಮಾಹಿತಿಗಳನ್ನು ಸ್ಪಷ್ಟಪಡಿಸುವುದಾಗಿದೆ

- ಹೊಸ ಅಭಿಪ್ರಾಯವನ್ನು ರೂಪಿಸುವುದಕ್ಕೆ ಸಹಕಾರಿಯಾಗಿದೆ.
- ಸಂಶೋಧನಾ ಸಮಸ್ಯೆಯ ಬಗ್ಗೆ ಜ್ಞಾನವನ್ನು ಹೆಚ್ಚಿಸುವುದು
- ಸಂಶೋಧನಾ ಸಮಸ್ಯೆಯ ಸಮರ್ಪಕ ರೂಪೀಕರಣ ಮಾಡುತ್ತದೆ.
- ಪರಿಕಲ್ಪನೆಗಳ ಸ್ಪಷ್ಟತೆಗೆ ಮಾಹಿತಿಗಳನ್ನು ಸಂಗ್ರಹಿಸುವುದು.

## ಪರಿಶೋಧನಾತ್ಮಕ ಸಂಶೋಧನೆಯ ಹಂತಗಳು
## STAGES OF EXPLORATORY RESEARCH

ಸಂಶೋಧಕನು ತನಗೆ ತಿಳಿಯದ ವಿಷಯಗಳ ಬಗ್ಗೆ ಜ್ಞಾನವನ್ನು ಪಡೆದುಕೊಂಡು, ತಿಳಿದುಕೊಂಡು ಪರಿಕಲ್ಪನೆಗಳನ್ನು ಸ್ಪಷ್ಟವಾಗಿ ನಿರೂಪಿಸಲು ಈ ಕೆಳಗಿನ ಹಂತಗಳು ಅನುಸರಿಸುವುದು ಮುಖ್ಯವಾಗಿದೆ.

- ಸಾಹಿತ್ಯದ ಸಮೀಕ್ಷೆಯನ್ನು ಮಾಡಿಕೊಳ್ಳಬೇಕು
- ವಿಷಯ ಪಂಡಿತರೊಡನೆ ಮತ್ತು ಅನುಭವಿಗಳೊಡನೆ ಸಂದರ್ಶನ
- ಒಳನೋಟ ಉತ್ತೇಜಿಸುವ ವಿಶ್ಲೇಷಣೆ ಮಾಡುವುದು.

## **ಪ್ರಯೋಗಾತ್ಮಕ ಸಂಶೋಧನೆ** EXPERIMENTAL RESEARCH

ಸಂಶೊಧನಾ ಸಮಸ್ಯೆಯನ್ನು ಪರಿಮಾಣಾತ್ಮಕವಾಗಿ ಅಧ್ಯಯನ ಮಾಡಿ ಪರಿಹಾರ ವೈಜ್ಞಾನಿಕ ಪದ್ಧತಿಯಿಂದ ಕಂಡುಹಿಡಿಯುವುದಾಗಿದೆ. ಅಂದರೆ ಪ್ರಯೋಗಾತ್ಮಕ ವಿಧಾನದಿಂದ ಪ್ರಚಲಿತ ಸಮಸ್ಯೆಯ ಪರಿಹಾರವನ್ನು ಪ್ರಯೋಗಕ್ಕೆ ಒಳಪಡಿಸಿ ಪರಿಹಾರವನ್ನು ಕಂಡುಹಿಡಿಯುವುದನ್ನು ಪ್ರಯೋಗಾತ್ಮಕ ಸಂಶೊಧನೆ

ಎನ್ನುವರು. ಅಥವಾ ವೈಜ್ಞಾನಿಕ ವಿಧಾನದಿಂದ ಸಮಸ್ಯೆಯ ಪರಿಹಾರವನ್ನು ಪತ್ತೆಹಚ್ಚುವುದನ್ನು ಪ್ರಯೋಗಾತ್ಮಕ ಸಂಶೋಧನೆ ಎನ್ನುವರು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಸಮಸ್ಯೆಯ ಪರಿಹಾರಗಳನ್ನು ಪ್ರಯೋಗ ರೀತಿಯಲ್ಲಿ ಪ್ರಾಕಲ್ಪನೆಯನ್ನು ರಚನೆ ಮಾಡಿ ಪರೀಕ್ಷಸಲಾಗುತ್ತದೆ. ಅಂದರೆ ಸ್ವತಂತ್ರ ಚಲಕದ ಸ್ಥಿತ್ಯಾಂತರದಿಂದ ಪರತಂತ್ರ ಚಲಕದ ಮೇಲೆ ಆಗುವ ಪರಿಣಾಮವನ್ನು ನಿರ್ದಿಷ್ಟವಾಗಿ ಮತ್ತು ಪರಿಮಾಣಾತ್ಮಕವಾಗಿ ಅದ್ಯಯನ ಮಾಡುವ ವಿಧಾನವನ್ನು ಪ್ರಾಯೋಗೀಕ ಸಂಶೋಧನಾ ಎನ್ನುವರು. ಪ್ರತಿಯೊಂದು ಸಮಸ್ಯೆಗೂ ಊಹಿಸಿದ ತಾತ್ಕಾಲಿಕ ಪರಿಹಾರವನ್ನು ಪ್ರಯೋಗ ರೀತಿಯಲ್ಲಿ ಅಳವಡಿಸಿ ಪ್ರಾಕಲ್ಪನೆಯನ್ನು ಪರೀಕ್ಷೆ ಮಾಡಿ ಅನುಷ್ಠಾನಕ್ಕೆ ತರುವ ಒಂದು ಉಪಕ್ರಮವನ್ನು ಪ್ರಯೋಗಾತ್ಮಕ ಸಂಶೋಧನೆಯ ಎನ್ನುತ್ತಾರೆ. ಉದಾ: ಮಾತೃ ಭಾಷೆಯಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಯು ಇಂಗ್ಲಿಷ ಭಾಷೆಯಲ್ಲಿ ಹೊಂದಿರುವ ಪ್ರಾವಿಣ್ಯತೆಯನ್ನು ಮತ್ತು ಇಂಗ್ಲಿಷ್ ಭಾಷೆಯುಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಯ ಜೊತೆಗೆ ಹೋಲಿಕೆ ಮಾಡಿದಾಗ ಸಹಜವಾಗಿ ಯಾರ ಸಾಮರ್ಥ್ಯ ಹೆಚ್ಚಾಗುವುದೆಂದು ತಿಳಿಯಬಹುದು.

## ಪ್ರಯೋಗಾತ್ಮಕ ಸಂಶೋಧನೆಯ ಗುಣಲಕ್ಷಣಗಳು
## CHARACTERISTICS OF EXPERIMENTAL RESEARCH

ಪ್ರಯೋಗಾತ್ಮಕ ಸಂಶೋಧನೆಯು ಸಮಾಜದ ಎರಡು ಪರಿವರ್ತನೆಗಳ ನಡುವಿ ಸಂಬಂಧವನ್ನು ಅಧ್ಯಯನ ಮಾಡುತ್ತಾ, ಸಂಗ್ರಹಿಸಿದ ಮಾಹಿತಿಯನ್ನು ಭವಿಸ್ಯದ ನಿರ್ಮಾಣ ನಿರ್ಣಯನ್ನು ರೂಪಿಸುತ್ತದೆ

- ಎರಡು ಪರಿವರ್ತನೆಗಳ ನಡುವಿನ ಸಂಬಂಧ ಅಧ್ಯಯನ ಮಾಡುತ್ತದೆ
- ಪ್ರಾಕಲ್ಪನೆಗಳು ನಿರ್ದೇಶಿತ ಪ್ರಾಕಲ್ಪನೆಗಳಿರುತ್ತವೆ. ಉದಾ: ಪರತಂತ್ರ ಚಲಕದ ಮೇಲೆ ಸ್ವತಂತ್ರ ಚಲಕದ ಪ್ರಭಾವ ಹೆಚ್ಚಿನ ಪರಿಣಾಮವನ್ನು ಬೀರುತ್ತದೆ.
- ಚಲಕಗಳನ್ನು ನಿಯಂತ್ರಿಸುವುದರಿಂದ ಪ್ರಯೋಗದ ತೀರ್ಮಾನಗಳು ಹೆಚ್ಚು ನಿಖರತೆಯನ್ನು ಪಡೆಯುತ್ತವೆ.
- ಭವಿಷ್ಯದ ನಿರ್ಣಯಗಳನ್ನು ರೂಪಿಸುತ್ತದೆ
- ಮಾಹಿತಿಯನ್ನು ನೇರವಾಗಿ ದಾಖಲಿಸಿಕೊಳ್ಳುತ್ತದೆ.
- ಪ್ರಯೋಗದ ಪುನಾರವರ್ತನೆ ಸಾದ್ಯವಾಗುತ್ತದೆ.

## ಪ್ರಯೋಗಾತ್ಮಕ ಸಂಶೋಧನೆ ಹಂತಗಳು

## STAGES OF EXPERIMENTAL RESEARCH

ಪ್ರಯೋಗಾತ್ಮಕ ಸಂಶೋಧನೆಯು ಸಂಶೋಧನಾ ವಿಷಯದ ,ಸಾಹಿತ್ಯವನ್ನು ಅವಲೋಕನ ಮಾಡುವ ದೃಷ್ಟಿಯಿಂದ ಸಮಸ್ಯೆಯನ್ನು ಆಯ್ಕೆ ಮಾಡಿಕೊಳ್ಳಕೊಂಡು ನಿರೂಪಿಲಿ ಈ ಕೆಳಗಿನ ಹಂತಗಳನ್ನು ಅನುಸರಿಸಬಹುದು.

- ಪ್ರಯೋಗದ ಸಮಸ್ಯೆಯ ಆಯ್ಕೆ
- ಸಾಹಿತ್ಯಾವಲೋಕನ
- ಪ್ರಾಕಲ್ಪನೆಗಳ ರಚನೆ
- ಪ್ರಾಯೋಗಿಕ ವಿಧಾನವನ್ನು ರೂಪಿಸುವುದು
- ಪ್ರಯೋಗದ ಕಾರ್ಯಕ್ರಮದ ಹಂತ
- ಸಂಶೋಧನಾ ವಿಶ್ಲೇಷಣೆ
- ತೀರ್ಮಾನ ಮತ್ತು ಪ್ರಗೋಗದ ಸಫಲತೆ
- ಸಂಶೋಧನೆಯ ವರದಿ ತಯಾರಿಕೆ

## ಕ್ರಿಯಾ ಸಂಶೋಧನೆ ACTION RESEARCH

ಸಂಶೋಧನೆಯಿಂದ ಹೊರಬಂದ ತೀರ್ಮಾನಗಳನ್ನು ಕಾರ್ಯಾರೂಪಕ್ಕೆ ತರುವ ಅಥವಾ ಕೈಗೊಳ್ಳುವ ಉದ್ದೇಶದಿಂದ ಸಂಶೋಧನೆಗಳು ನಡಯುವ ಪ್ರಕ್ರಿಯೆಯನ್ನು ಕ್ರಿಯಾತ್ಮಕ ಸಂಶೋಧನೆಗಳು ಎನ್ನುತ್ತಾರೆ. ಇಲ್ಲ ಸಮಸ್ಯೆಯನ್ನು ಎದುರಿಸುವ ವ್ಯಕ್ತಿಯೇ ಅವುಗಳನ್ನು ಪರಿಹರಿಸಲು ಪ್ರಯತ್ನಿಸಬೇಕು ಎಂದರ್ಥ.

## ಕ್ರಿಯಾ ಸಂಶೋಧನೆ ಅರ್ಥ MEANING OF ACTION RESEARCH

ಒಂದು ನಿರ್ದಿಷ್ಟವಾದ ಕ್ಷೇತ್ರದಲ್ಲಿ ಸಂಶೋಧಕರಿಗೆ ಸಂಶೋಧನೆಯನ್ನು ಮಾಡಲು ಒಳಗುಟ್ಟನ್ನು ತಿಳಿಸಿಕೊಡುವ ಪ್ರಕ್ರಿಯೆಯನ್ನು ಕ್ರೀಯಾ ಸಂಶೋಧನೆ ಎನ್ನುವರು.ಕ್ರಿಯಾ ಸಂಶೋಧನೆಯು ಹೆಚ್ಚು ವೈಜ್ಞಾನಿಕವು, ವಸ್ತುನಿಷ್ಠವು , ಶಿಸ್ತುಬದ್ಧವೂ ಆದ ಒಂದು ಮಾರ್ಗವಾಗಿದೆ. ಈ ಸಂಶೋಧನೆಯಲ್ಲಿ ಸಮಸ್ಯೆಯ ಪರಿಹಾರ ಮಾರ್ಗವನ್ನು ಸದಾ ವಾಸ್ತವಿಕ ದೃಷ್ಟಿಯಿಂದ ಆಲೋಚಿಸಲಾಗುತ್ತದೆ.

ಕುರ್ಟ್ ಲೆವಿನ್‌ರನ್ನು ಕ್ರಿಯಾ ಸಂಶೋಧನೆಯ ಜನಕ ಎಂದು ಕರೆಯುತ್ತಾರೆ.ಇವರು ಕ್ರಿಯಾ ಸಂಶೋಧನೆಯ ಪರಿಕಲ್ಪನೆಯನ್ನು ಮೊದಲ ಬಾರಿಗೆ 1946ರಲ್ಲಿ ಸೃಜಿಸಿದ ಶಾಲಾ ವಾತಾವರಣದಲ್ಲಿ ವಿವಿಧ ಸ್ಥಳೀಯ ಸಮಸ್ಯೆಗಳಿಗೆ ವೈಜ್ಞಾನಿಕ ಮತ್ತು ಪ್ರಚಲಿತ ದೃಷ್ಟಿಕೋನಗಳ ಮೂಲಕ ಪರಿಹಾರ ಕಂಡುಕೊಳ್ಳುವ ಬಗ್ಗೆ ಕ್ರೀಯಾ ಸಂಶೋಧನಾ ವಿಧಾನವನ್ನು ಸ್ಟೀಫನ್ ಕೋರೆ 1953ರಲ್ಲಿ ರೂಪಿಸಿದರು. ಭಾರತ ದೇಶದಲ್ಲಿ 1970ರಲ್ಲಿ ನಂತರ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿದೆ.

## ಕ್ರಿಯಾ ಸಂಶೋಧನೆ ವ್ಯಾಖ್ಯೆಗಳು
## DEFINITION OF ACTION RESEARCH

**ಸ್ಟೀಫನ್ ಎಂ. ಕೋರೆ:** "ತಮ್ಮ ಇಚ್ಛಿತ ಯೋಜನೆ ಮತ್ತು ಮಾರ್ಗದಲ್ಲಿ ಬದಲಾವಣೆ ತರಲು ತೆಗೆದುಕೊಳ್ಳುವಂತಹ ಸಂಶೋಧನೆಯನ್ನು ಕ್ರೀಯಾ ಸಂಶೋಧನೆ ಎಂದು ಕರೆದಿದ್ದಾರೆ."

**ಕುರ್ಟ್ ಲೆವಿನ್‌ರವರ ಪ್ರಕಾರ:** "ಕ್ರೀಯಾ ಸಂಶೋಧನೆ ಎಂಬುದು ಕಾರ್ಯಕರ್ತರು ಅವರ ಸದ್ಯದ ಸಂದರ್ಭಗಳನ್ನು ಅವರ ಸಾಮಾಜಿಕ ಅಥವಾ ಶೈಕ್ಷಣಿಕ ಆಚರಣೆಗಳನ್ನು ಉತ್ತಮಪಡಿಸಿಕೊಳ್ಳುವ ಸಲುವಾಗಿ ಕೈಗೊಳ್ಳುವ ಸಾಂಘಿಕ, ಸ್ಪಷ್ಟ, ವಿಮರ್ಶಯುಳ್ಳದ್ದೂ ಆಗಿದೆ. ಒಂದು ರೀತಿಯ ವೈಜ್ಞಾನಿಕ ಅನ್ವೇಷಣೆ ಆಗಿದೆ."

## ಕ್ರೀಯಾ ಸಂಶೋಧನೆಯ ಮಹತ್ವ
## IMPORTANCE OF ACTION RESEARCH

ಕ್ರೀಯಾ ಸಂಶೋಧನೆಯು ಪ್ರಪಂಚದಾದ್ಯಂತ ಪ್ರತಿಯೊಂದು ಶೈಕ್ಷಣಿಕ ಕ್ಷೇತ್ರದಲ್ಲಿ ಮಹತ್ವವನ್ನು ಪಡೆದಿದ್ದು, ಪಠ್ಯ , ಪಠ್ಯೇತರ , ಬೋಧನಾ ವಿಧಾನ ,ಶಿಸ್ತು, ಕಲಿಕೆಯ ಗತಿ, ಮತ್ತು ಮೌಲ್ಯಮಾಪನದ ಸುಧಾರಣೆಗಾಗಿ ತನ್ನದೆ ಆದ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ.ಶಿಕ್ಷಣ ರಂಗವು ಇದರ ಮಹತ್ವವನ್ನು ಅರಿತು DIET, DSERT, NCERT, SSA ವತಿಯಿಂದ ಕ್ರೀಯಾ ಸಂಶೋಧನೆಯನ್ನು ಕೈಗೊಳ್ಳಲು ತರಬೇತಿ ಹಾಗೂ ಸೌಲಭ್ಯವನ್ನು ಒದಗಿಸುತ್ತಿದೆ.

1. ಶೈಕ್ಷಣಿಕ ಕ್ಷೇತ್ರದಲ್ಲಿ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಿಗಾಗಿ ಉಪಯೋಗವಾಗುತ್ತದೆ
2. ಸಮಸ್ಯೆಗಳ ಅಧ್ಯಯನದಲ್ಲಿ ಬಳಕೆಯಾಗುತ್ತದೆ
3. ಮೌಲ್ಯಮಾಪನ ಕ್ಷೇತ್ರಗಳಲ್ಲಿ ಬಳಕೆಯಾಗುತ್ತದೆ.
4. ಶಿಕ್ಷಣ ಕ್ಷೇತ್ರದಲ್ಲಿ ಹೊಸ ವಿಧಾನವನ್ನು ಹುಡುಕುತ್ತದೆ.
5. ಸಂಶೋಧನಾ ಕ್ಷಮತೆಯನ್ನು ಹೆಚ್ಚಿಸುತ್ತದೆ.
6. ಶಿಕ್ಷಕರ ಸಂಶೋಧನಾ ಕೌಶಲ್ಯವನ್ನು ಬೆಳೆಸುತ್ತದೆ
7. ಶಿಕ್ಷಕರಲ್ಲಿ ಯೋಜನಾ ವಿಧಾನ ಮತ್ತು ವೃತ್ತಿಪರ ಮನೋಭಾವ ಬೆಳೆಸುತ್ತದೆ
8. ಸಂಶೋಧನೆಯಲ್ಲಿ ವಸ್ತುನಿಷ್ಠತೆ ಮತ್ತು ಸೌಹಾರ್ದತೆಯನ್ನು ಹೆಚ್ಚಿಸುತ್ತದೆ.
9. ಶೈಕ್ಷಣಿಕ ಉನ್ನತೀಕರಣಗಳಿಸುತ್ತದೆ (improvement)
10. ಸಾಮಾಜಿಕ ಸಹಭಾಗಿತ್ವ ನಿರ್ಮಿಸುತ್ತದೆ ( involvement )

## ಕ್ರೀಯಾ ಸಂಶೋಧನೆಯ ವ್ಯಾಪ್ತಿ
## SCOPE OF ACTION RESEARCH

ಕ್ರೀಯಾ ಸಂಶೋಧನೆಯ ವ್ಯಾಪ್ತಿಯು ಸೀಮಿತವಾಗಿದ್ದರೂ ಸಂಭಂಧಿತ ಕ್ಷೇತ್ರದಲ್ಲಿ ಕೆಲಸ ಮಾಡುವ ಎಲ್ಲ ಮಟ್ಟದ ಕಾರ್ಯಕರ್ತರು ಭಾಗವಹಿಸಬಹುದಾದ ವ್ಯವಸ್ಥೆಯನ್ನು ಹೊಂದಿದೆ . ಉದಾಹರಣೆಗೆ ಶೈಕ್ಷಣಿಕ ಕ್ಷೇತ್ರದಲ್ಲಿ ಬೋಧನಾ ವಿಧಾನ, ಆಡಳಿತ, ತರಗತಿ ನಿರ್ವಹಣೆ, ಸಮಸ್ಯಾತ್ಮಕ ವಿದ್ಯಾರ್ಥಿಗಳ ಕಲಿಕೆಯ ಮಟ್ಟ, ಶಿಕ್ಷಣದಲ್ಲಿ ಹಿಂಬೀಳಿಕೆ ಹೀಗೆ ಹಲವಾರು ರೀತಿಯ ಸಮಸ್ಯೆಗಳ ಪರಿಹಾರವನ್ನು ಒದಗಿಸುವ ವ್ಯಾಪ್ತಿಯನ್ನು ಹೊಂದಿರುತ್ತದೆ.

1. ಕ್ರಿಯಾ ಸಂಶೋಧನೆಯನ್ನು ಅನ್ವಯಿಕ ಸಂಶೋಧನೆಯೆಂದು ಕರೆಯಬಹುದು
2. ಸಮಸ್ಯೆಗೆ ಉಪಾಯಗಳನ್ನು ಕಂಡುಕೊಳ್ಳುತ್ತದೆ
3. ಸಂಶೋಧನೆಯು ಎಲ್ಲಾ ಕ್ಷೇತ್ರಗಳಿಗೆ ಅನ್ವಯವಾಗುತ್ತದೆ
4. ಮನೋವೈಜ್ಞಾನಿಕ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸುತ್ತದೆ.

## ಕ್ರೀಯಾ ಸಂಶೋಧನೆಯ ಗುರಿ ಮತ್ತು ಉದ್ದೇಶಗಳು
## OBJECTIVE OF ACTION RESEARCH

ಸಂಶೋಧನೆಯನ್ನು ಪರಿಣಾಮಕಾರಿಯಾಗಿ ಕೈಗೊಳ್ಳಲು ಆಯಾ ಕ್ಷೇತ್ರಕ್ಕೆ ಅವಶ್ಯಕವಾದ ವಿಧಾನವನ್ನು ಕಂಡುಹಿಡಿಯಲು , ಹಾಗೂ ಸಂಶೋಧನೆಯ ನಿಯಮಗಳನ್ನು ಪಾಲಿಸುವ ನಿಟ್ಟಿನಲ್ಲಿ ಅದರದೆ ಕೆಲವು ಗುರಿ ಉದ್ದೇಶಗಳನ್ನು ಹೊಂದಿದೆ. ಅವುಗಳು ಈ ಕೆಳಗಿನಂತಿವೆ.

1. ಸಂಶೋಧನೆಗೆ ಹೊಸ ವಿಧಾನವನ್ನು ಕಂಡು ಹಿಡಿಯುವುದು
2. ಶಿಕ್ಷಣ ಪದ್ಧತಿಯಲ್ಲಿ ಸುಧಾರಣೆ ತರುವುದು
3. ಶಿಕ್ಷಕನ ಕಾರ್ಯ ನಿರ್ವಹಣೆಯಲ್ಲಿ ಬದಲಾವಣೆ ತರುವುದು
4. ಶೈಕ್ಷಣಿಕ ಸಮಸ್ಯೆಗಳನ್ನು ವೈಜ್ಞಾನಿಕ ವಿಧಾನಗಳಿಂದ ಪರಿಹರಿಸುವ ಗುರಿಯನ್ನು ಹೊಂದಿದೆ.
5. ಯಾಂತ್ರಿಕ ಮತ್ತು ಸಾಂಪ್ರದಾಯಿಕ ಪದ್ಧತಿಗಳನ್ನು ತೊಡೆದುಹಾಕುವುದು
6. ಶಿಕ್ಷಕರು ಮತ್ತು ಆಡಳಿತಗಾರರ ಸಾಧನೆಯ ಗುಣಮಟ್ಟವನ್ನು ಹೆಚ್ಚಿಸುವುದು
7. ಶಿಕ್ಷಕರಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ಅನ್ವೇಷಣಾ ಮನೋಭಾವವನ್ನು ಬೆಳೆಸುವುದು
8. ಸಂಶೋಧನಾ ಪ್ರವೃತ್ತಿಯನ್ನು ಬೆಳೆಸುವುದು

## ಕ್ರೀಯಾ ಸಂಶೋಧನೆಯ ಗುಣಲಕ್ಷಣಗಳು
## CHARACTERISTICS OF ACTION RESEARCH

ಕ್ರೀಯಾ ಸಂಶೋಧನೆಯು ವಿವಿಧ ವಿಧಾನವನ್ನು ಅನುಸರಿಸಿ ಮುಕ್ತ ಮನದಿಂದ ಹಲವಾರು ವಿಷಯಗಳನ್ನು ಅನ್ವೇಷಣೆಯನ್ನು ಮಾಡುತ್ತಾ ಏಕಕಾಲದಲ್ಲಿ ಸಮಸ್ಯೆಯನ್ನು ಪರಿಹರಿಸಲು ವೈಜ್ಞಾನಿಕ ಜ್ಞಾನವನ್ನು ವಿಸ್ತರಿಸಲು ಸಹಕಾರಿಯಾಗುವಂತಹ ಗುಣಲಕ್ಷಣಗಳನ್ನು ಈ ರೀತಿಯಾಗಿ ಪಟ್ಟಿ ಮಾಡಬಹುದು.

1. ಕ್ರೀಯಾ ಸಂಶೋಧನೆ ಪರಿಮಿತಿ ಕಾಲ, ಸ್ಥಳ ಮತ್ತು ವಸ್ತುನಿಷ್ಠತೆಯನ್ನು ಹೊಂದಿದೆ
2. ಸ್ಥಳೀಯ ಅನ್ವಯಿಕ ಗುಣವನ್ನು ಹೊಂದಿದೆ
3. ಸ್ಥಳೀಯ ಸಮಸ್ಯೆಗೆ ತಕ್ಷಣ ಪರಿಹಾರವನ್ನು ಸೂಚಿಸುತ್ತದೆ.
4. ನಿಗದಿತ ಅಧ್ಯಯನಗಳನ್ನು ಅನುಸರಿಸಿ ಸಮಸ್ಯೆಯನ್ನು ಅಧ್ಯಯನ ಮಾಡುತ್ತದೆ
5. ದತ್ತಾಂಶಗಳನ್ನು ಸರಳ ಸಾಧನಗಳಿಂದ ವಿಶ್ಲೇಷಿಸಬಹುದು.
6. ಶಿಕ್ಷಕರ ವರ್ತನೆಯಲ್ಲಿ ಬದಲಾವಣೆಯನ್ನು ತರುತ್ತದೆ.
7. ಸಂಶೋಧಕನು ಕ್ರೀಯಾಶೀಲನಾಗಿ ಪಾಲ್ಗೋಳ್ಳುತ್ತಾನೆ.
8. ಅವಲೋಕನ ಮತ್ತು ಪುನರಾವಲೋಕನದ ಪ್ರಕ್ರಿಯೆಯಾಗಿದೆ.

## ಲಕ್ಷಣ ನಿರ್ಣಯ ಸಂಶೋಧನೆ;
## DIGNOSTIC RESEARCH

ಈ ಸಂಶೋಧನೆಯು ವರ್ಣಾನಾತ್ಮಕ ಅಥವಾ ವಿವರಣಾತ್ಮಕ ಸಂಶೋಧನೆಯಲ್ಲಿ ಕೈಗೊಳ್ಳುವ ಪ್ರಕ್ರಿಯೆಯಂತೆ, ಸಮಸ್ಯೆಯ ಕಾರಣ ಮತ್ತು ಪರಿಣಾಮಗಳನ್ನು ಸೂಚಿಸುವ ಅಧ್ಯಯನಗಳು ಲಕ್ಷಣ ನಿರ್ಣಯ ಸಂಶೋಧನೆ ಎನ್ನುತ್ತಾರೆ. ಇಲ್ಲ ಸಂಶೋಧನೆಯ ಮೂಲಕ ಎಲ್ಲಿ, ಏನು, ಹೇಗೆ, ಮತ್ತು ಯಾಕೆ ಈ ರೀತಿ ನಡೆಯುತ್ತಿದೆ ಅಥವಾ ಹೀಗಾಗುತ್ತಿದೆ ಎನ್ನುವ ಪ್ರಶ್ನೆಗಳಿಗೆ ಉತ್ತರ ಪಡೆಯುವಲ್ಲಿ ಮತ್ತು ಅದರ ಫಲಿತಾಂಶವನ್ನು ನೀಡುವಲ್ಲಿ ಮಹತ್ವಪೂರ್ಣವಾದ ಮಾಹಿತಿಯನ್ನು ಒದಗಿಸುತ್ತದೆ. ಉದಾ: ಒಂದೇ ಜಾತಿ, ಧರ್ಮ, ಸಮುದಾಯಕ್ಕೆ ಏಕೆ ಮತ ಕೊಡುವುದು?,ಅಂತರ್ಜಾತಿ ವಿವಾಹಗಳು ಮುಕ್ತ ಮನಸ್ಸಿನಿಂದ ಏಕೆ ಒಪ್ಪಿಕೊಳ್ಳುವುದಿಲ್ಲ, ಭ್ರಷ್ಟಾಚಾರವೇಕೆ ವ್ಯಾಪಕವಾಗಿ ಹರಡುತ್ತಿದೆ ? ಮತ್ತು ಭಯೋತ್ಪಾದನೆಗೆ ಇಂಬು ಕೊಟ್ಟಿರುವುದೇಕೆ ? ಎನ್ನುವ ಮುಂತಾದ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನ ಲಕ್ಷಣ ನಿರ್ಣಯ ಸಂಶೋಧನಾಧ್ಯಯನದಲ್ಲಿದೆ. ಈ ಅಧ್ಯಯನವು ಜ್ಞಾನ ವಿಸ್ತರಣೆಯಾಗದ ಕ್ಷೇತ್ರದಲ್ಲಿ ಬಳಸಿಕೊಳ್ಳುವಂತಿಲ್ಲ.

### ಲಕ್ಷಣ ನಿರ್ಣಯ ಸಂಶೋಧನೆಯ ಗುಣಲಕ್ಷಣಗಳು
### CHARACTERISTICS OF DIGNOSTIC RESEARCH

1. ಲಕ್ಷಣ ನಿರ್ಣಯ ಸಂಶೋಧನೆಗಳು ಸಮಸ್ಯೆಯನ್ನು ಗುರುತಿಸಿ ಪರಿಹಾರವನ್ನು ಸೂಚಿಸುತ್ತದೆ.

2. ಲಕ್ಷಣ ನಿರ್ಣಯ ಸಂಶೋಧನೆಯು ಏನು, ಏಕೆ, ಮತುತ ಏನು ಮಾಡಬೇಕು ಎನ್ನುವ ಪ್ರಶ್ನೆಗಳಿಗೆ ಉತ್ತರ ನೀಡುತ್ತದೆ.
3. ಲಕ್ಷಣ ನಿರ್ಣಯ ಸಂಶೋಧನೆಯು ಪೂರ್ವಕಲ್ಪನೆಗಳನ್ನು ಆಧರಿಸಿರುತ್ತದೆ.
4. ಲಕ್ಷಣ ನಿರ್ಣಯ ಸಂಶೋಧನೆಯು ಜ್ಞಾನ ವಿಸ್ತರಣೆಯಾಗದ ಕ್ಷೇತ್ರಗಳಲ್ಲಿ ಕೈಗೊಳ್ಳುವಂತಿಲ್ಲ.

## ತುಲನಾತ್ಮಕ ಸಂಶೋಧನೆ
## COMPARATIVE RESEARCH

ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ವಿಷಯಗಳನ್ನು ತುಲನೆ ಮಾಡಲು ಕೈಗೊಳ್ಳುವ ಸಂಶೋಧನೆಯಾಗಿದೆ ಕಾರಣ ಇಲ್ಲಿ ತುಲನೆ ಮಾಡುವ ವಿಷಯಗಳು ಏಕರೂಪವಾಗಿರುವುದಿಲ್ಲ. ಉದಾ: ವಿವಿಧ ದೇಶಗಳ ಜನರ ವಲಸೆ, ಅಭಿವೃದ್ಧಿ, ಸಬಲೀಕರಣ, ಮಹೀಳಾ ಸ್ಥಾನಮಾನ ಜೀವನದ ಗುಣಮಟ್ಟ, ವಾಣಿಜ್ಯ ಬ್ಯಾಂಕುಗಳ ತುಲನಾತ್ಮಕ ಸಾಧನೆ, ಕೃಷಿ ಕೈಗಾರಿಕಾ ಕ್ಷೇತ್ರಗಳ ತುಲನಾತ್ಮಕ ಬೆಳವಣಿಗೆ, ಗ್ರಾಮೀಣ ಮತ್ತು ನಗರವಾಸಿಗಳ ಜೀವನ ಮಟ್ಟದ ತುಲನೆ.

### ಲಕ್ಷಣ ನಿರ್ಣಯ ಸಂಶೋಧನೆ ಕೈಗೊಳ್ಳಲು ವಹಿಸಬೇಕಾದ ಮುನ್ನೆಚ್ಚರಿಕೆಗಳು/ಮಿತಿಗಳು

ಸಂಶೋಧಕನು ತನ್ನ ಅಧ್ಯಯನದಲ್ಲಿ ಕೆಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಈ ಸಮಸ್ಯೆಯ ನಿವಾರಣೆಗೆ ಸಂಶೋಧಕನು ಯಾವುದೇ ರೀತಿಯ ಪ್ರಾಕ್‌ಕಲ್ಪನೆಗಳನ್ನು ರೂಪಿಸುವುದು ಸಾಧ್ಯವಾಗುವುದಿಲ್ಲ ಹಾಗೂ ತುಲನೆ ಮಾಡುವ ವಿಷಯಗಳಲ್ಲಿ ಏಕರೂಪತೆಯಿರುವುದಿಲ್ಲ ಇಂತಹ ತೊಂದರೆಗಳು ಹಲವಾರು ರೀತಿಯ ಅಂಶಗಳು ಪ್ರಭಾವ ಬೀರುವುದರಿಂದ ತುಲನಾತ್ಮಕ ಅಧ್ಯಯನವನ್ನು ನಡೆಸುವವರು ಕೆಲವು ಮುನ್ನೆಚ್ಚರಿಕೆಗಳನ್ನು ವಹಿಸಿಕೊಳ್ಳಬೇಕಾಗುತ್ತದೆ. ಅವುಗಳು ಈ ಕೆಳಗಿನಂತಿವೆ.

1. ತುಲನೆಗೆ ಅಗತ್ಯವಿರುವ ದತ್ತಾಂಶಗಳನ್ನು ಮಾತ್ರ ಸಂಗ್ರಹಿಸಬೇಕು
2. ಅಸ್ತಿತ್ವದಲ್ಲಿರುವ ಮಾಹಿತಿಗಳನ್ನು ಮಾತ್ರ ಸಂಗ್ರಹಿಸಬೇಕು
3. ಪೂರ್ವಗ್ರಹವಿಲ್ಲದೆ ತೀರ್ಮಾನಕ್ಕೆ ಬರಬೇಕು

### ಮಾದರಿ ರೂಪೀಕರಣದ ಸಂಶೋಧನೆ

ಮಾದರಿ ರೂಪೀಕರಣದ ಸಂಶೋಧನೆಯು ಮಾದರಿಗಳು ಚರಪರಿಮಾಣಗಳ ನಡುವೆ ಇರುವ ಸಂಬಂಧಗಳನ್ನು ತಿಳಿಸುತ್ತವೆ. ಸಂಕೀರ್ಣ ಸಮಸ್ಯೆಗಳನ್ನು ಸರಳಗೊಳಿಸಲು ಮತ್ತು ಸುಲಭವಾಗಿ ಅರ್ಥೈಸಲು ಮಾದರಿಗಳನ್ನು ರೂಪಿಸಲಾಗುತ್ತದೆ. ಉದಾ ಭಾರತದ ಪಂಚವಾರ್ಷಿಕ ಯೋಜನೆಗಳಿಗೆ ಮಹಲನೋಬಿಸ್ ಮಾದರಿಯ ತಳಪಾಯವಾಗಿತ್ತು. 1930ರ ದಶಕದ ಮಹಾ ಆರ್ಥಿಕ ಮುಗ್ಗಟ್ಟನ್ನು ಪರಿಹರಿಸಲು ಅಮೇರಿಕವು ಕೇನ್ಸ್‌ನ

ಮಾದರಿಯನ್ನು ಬಳಸಿಕೊಂಡಿತು. ಬಡತನ ಮತ್ತು ನಿರುದ್ಯೋಗ ನಿವಾರಣೆಗಾಗಿ ಡಾ. ಬ್ರಹ್ಮಾನಂದರು ಕೂಲಿ ಸರಕು ಮಾದರಿಯನ್ನು ರೂಪಿಸಿದ್ದರು. ಹಿಂದೆ ಬ್ರಿಟಿಷರು ಅಣೆಕಟ್ಟು ಕಟ್ಟಲು ವಿಶ್ವೇಶ್ವರಯ್ಯ ಮಾದರಿಯನ್ನು ಬಳಸುತ್ತಿದ್ದರು.

## ಆಧಾರ ಗ್ರಂಥಗಳು


1. ಚ.ನ ಶಂಕರರಾವ್(2020–21) ಸಂಶೋಧನಾ ವಿಧಾನ ಜೈಭಾರತ ಪ್ರಕಾಶನ, ಮಂಗಳೂರು
2. ಚ.ನ ಶಂಕರರಾವ್(2017–18) ಸಾಮಾಜಿಕ ಸಂಶೋಧನೆಯ ಕೈಪಿಡಿ ಜೈಭಾರತ ಪ್ರಕಾಶನ, ಮಂಗಳೂರು
3. ಡಾ. ಬಿ. ಪ್ರಭಾಕರ ಶಿಶಿಲ (2017) ಸಂಶೋಧನೆಯ ವಿಧಾನಗಳು ಎಸ್. ಎಸ್. ಭಾವಿಕಟ್ಟಿ ಪ್ರಕಾಶನ ಮುಖ್ಯರಸ್ತೆ, ಕಲಬುರಗಿ
4. ಡಾ. ಜಿ. ಎನ್. ಅಶೋಕ (2020) ಸಂಶೋಧನಾ ವಿಧಾನ ಲಕ್ಷ್ಮೀ ಮುದ್ರಣಾಲಯ ಚಾಮರಾಜಪೇಟೆ ಬೆಂಗಳೂರು


PREPARED BY


Dr. A. G. Khan Associate professor of Sociology GFGC Chittapur

Dr. Manikamma. N. Sultanpur, Asst. Prof. of Sociology, Smt. C. B. Patil Degree College Chincholi


Thank you

STAY HOME, STAY SAFE AND STUDY STEADILY